

ಸಾರಿಸ್ಕ ಕಾಡು ಸಮೃದ್ಧ ಜೀವಪ್ರಭೇಧಗಳ ತವರು

## ಕಾಣದ ಪರಿಹಾರ

ಬೆದೆಗೆ ಬಂದಿರುವ ಹೆಣ್ಣು ಹುಲಿಗೆ ಗಂಡು ಹೊಂದಿಸುವುದು ಹೇಗೆ? ಎಂಬ ಪ್ರಶ್ನೆ ಅರಣ್ಯ ಇಲಾಖೆಯ ಮುಂದೆ ಇದೆ. ಸುಲಭದ ದಾರಿ ಎಂದರೆ ನೆರೆಯ ರಣಥಂಬೋರ್‌ನಿಂದ ತಂದರಾಯಿತು ಎಂದು ಸಲಹೆಯನ್ನು ಈಗಾಗಲೇ ನೀಡಲಾಗಿದೆ. ಎಲ್ಲಿಯವರೆಗೆ ಹೀಗೆ ನಡೆಯುತ್ತದೆ, ಇದು ಸರಿಯಾದ ಕ್ರಮವಲ್ಲ. ಕಳ್ಳಬೇಟೆ ತಡೆಯದಿದ್ದರೆ, ಎಷ್ಟೇ ಹುಲಿಗಳನ್ನೂ ಸ್ಥಳಾಂತರಿಸಿದರೂ ಸಮಸ್ಯೆ ನೀಗುವುದಿಲ್ಲ.

ಸಾರಿಸ್ಕ ಅರಣ್ಯದ ಒಳಗೆ 29 ಹಳ್ಳಿಗಳಿದ್ದು ಅವುಗಳಲ್ಲಿ 25 ಸಾವಿರ ಜನ ವಾಸವಾಗಿದ್ದಾರೆ. ಅವರನ್ನು ಅಲ್ಲಿಂದ ಸ್ಥಳಾಂತರಿಸಿ, ಪುನರ್ವಸತಿ ಕಲ್ಪಿಸಬೇಕಾದ ತುರ್ತು ಇದೆ. ಈಗ ಕೇವಲ ಒಂದು ಹಳ್ಳಿಯ ಜನರನ್ನು ಮಾತ್ರ ಸ್ಥಳಾಂತರಿಸಲಾಗಿದೆ. ಎಲ್ಲ ಜನರ ಸ್ಥಳಾಂತರ ಇನ್ನೂ ತಡವಾಗುತ್ತದೆ. ಎಲ್ಲಿಯವರೆಗೆ ಜನರ ಒತ್ತಡ ಕಾಡಿನ ಮೇಲೆ ಇರುತ್ತದೆಯೋ ಅಲ್ಲಿಯವರೆಗೆ ಹುಲಿಗಳು ಸುರಕ್ಷಿತ ಅಲ್ಲ ಎನ್ನುವುದು ತಜ್ಞರ ವಾದ. ಅರಣ್ಯ ಇಲಾಖೆಯ ಸಮಜಾಯಿಷಿಯೇ ಬೇರೆ. ದೊಡ್ಡ ಅರಣ್ಯವನ್ನು ನೋಡಿಕೊಳ್ಳಲು ನಮ್ಮಲ್ಲಿರುವ ಮಾನವ ಸಂಪನ್ಮೂಲ ತೀರಾ ಕಡಿಮೆ. 224 ಸಿಬ್ಬಂದಿ ಇರಬೇಕಾದ ಜಾಗದಲ್ಲಿ 113 ಜಾಗ ಖಾಲಿ ಇವೆ. 2014ರಿಂದ ಇಲ್ಲಿಯವರೆಗೆ ಕಾಯಂ ಡಿಸಿಎಫ್ ಇಲ್ಲ. ಇರುವ ಸಿಬ್ಬಂದಿಗೆ ಕಳೆದ ಒಂಬತ್ತು ತಿಂಗಳಿನಿಂದ ಸಂಬಳ ನೀಡಿಲ್ಲ. ಒಂದು ಬೀಟ್‌ಗೆ ಮೂವರು ಗಾರ್ಡ್‌ಗಳನ್ನು ಮಾತ್ರ ಹಾಕಬಹುದು. 1250 ಚ.ಕಿ.ಮೀ.ನಷ್ಟು ದೊಡ್ಡದಾದ ಈ ಕಾಡಿಗೆ 400 ಜನ ಗಾರ್ಡ್‌ಗಳ ಅವಶ್ಯಕತೆ ಇದೆ. ಇದೆಲ್ಲ ಆಗುವವರೆಗೆ ಹುಲಿಗಳ ಸರಿಯಾದ ಸಂರಕ್ಷಣೆ ಅಸಾಧ್ಯ ಎನ್ನುತ್ತಾರೆ ಸಾರಿಸ್ಕ ಟೈಗರ್ ಫೌಂಡೇಶನ್‌ನ ಮುಖ್ಯಸ್ಥ ದಿನೇಶ್ ವರ್ಮಾ ದುರಾನಿ. ಅಲ್ಲದೆ ರಣಥಂಬೋರ್ ಉದ್ಯಾನವನದ ಪ್ರವಾಸೋದ್ಯಮಕ್ಕೆ ನೀಡುವ ಪ್ರಾಮುಖ್ಯತೆಯ ಅರ್ಧ ಭಾಗವೂ ಸಾರಿಸ್ಕಕ್ಕೆ ಸಿಗುತ್ತಿಲ್ಲ.

ಟೂರಿಸಂ ಅಭಿವೃದ್ಧಿಗೊಂಡರೆ, ಅನೇಕ ಸಮಸ್ಯೆಗಳು ತಾವೇ ತಾವಾಗಿ ಪರಿಹಾರಗೊಳ್ಳುತ್ತವೆ ಎಂದು ಅರಣ್ಯಾಧಿಕಾರಿಗಳಾದ ಶೆಖಾವತ್ ಹೇಳುತ್ತಾರೆ. ಗಂಡು ಹುಲಿಯ ಸ್ಥಳಾಂತರಕ್ಕೆ ಅರ್ಜಿ ಹಾಕಿ ಎರಡು ವರ್ಷಗಳೇ ಆಗಿವೆ. ಅಪಾಯದ ಅರಿವಿದ್ದರೂ ಉಸ್ತಾದ್ ಎಂಬ ನರಭಕ್ಷಕ ಹುಲಿಯನ್ನು ಸಾರಿಸ್ಕಕ್ಕೆ ಸ್ಥಳಾಂತರ ಮಾಡುವುದೆಂದು ನಿಗದಿಯಾಗಿ ರಣಥಂಬೋರ್‌ಗೆ ವಾಹನವನ್ನೂ ಕಳಿಸಲಾಗಿತ್ತು. ಇಲಾಖೆಯ ಒಳ ರಾಜಕೀಯದಿಂದಾಗಿ ಅದೂ ನಡೆದಿಲ್ಲ ಎಂಬ ದೂರುಗಳಿವೆ.

ಒಟ್ಟಾರೆ ಸಾರಿಸ್ಕದ ಹೆಣ್ಣು ಹುಲಿಗಳಿಗೆ ಸುಗಮ ಕೂಟ ಸಾಧ್ಯವಾಗುತ್ತಿಲ್ಲ. ಈಗ ಹರೆಯದಲ್ಲಿರುವ ST–6 ಎಂಬ ಒಂದೇ ಗಂಡು ಹುಲಿ ಆಹಾರ ಹುಡುಕಿಕೊಂಡು ಉತ್ತರ ಪ್ರದೇಶದವರೆಗೂ ಪ್ರಯಾಣ ಬೆಳೆಸಿ ವಾಪಸ್ ಬಂದಿದೆ. ಸರಿಯಾದ ಆಹಾರ ದೊರೆಯದಿದ್ದರೆ ಅದನ್ನೂ ನಾವು ಕಳೆದುಕೊಳ್ಳುತ್ತೇವೆ ಎಂಬ ಆತಂಕ ಎದುರಾಗಿದೆ. ತುಂಬು ಪ್ರಾಯದ ಐದು ಹೆಣ್ಣುಹುಲಿಗಳಿಗೆ ಗಂಡು ಸಕಾಲದಲ್ಲಿ ಸಿಗದಿದ್ದರೆ ಅವೂ ಸಹಾ ಕಾಡುತೊರೆದು ಬೇರೊಂದು ಕಾಡಿಗೆ ಹೋಗಲಿವೆ. ಅಷ್ಟರಲ್ಲಿ ಸರ್ಕಾರ ತುರ್ತು ಕ್ರಮ ಕೈಗೊಂಡರೆ ಮಾತ್ರ ಪರಿಸ್ಥಿತಿ ಸುಧಾರಿಸಬಹುದು.

**ಪ್ರತಿಕ್ರಿಯಿಸಿ:** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in